# ಮಹಜರು

ಸನ್ 2021 ನೇ ಇಸವಿ ಮಾರ್ಚ್ ತಿಂಗಳು 09 ನೇ ತಾರೀಖಿನಂದು ಬಳ್ಳಾರಿ ಪ್ರದೇಶಿಕ ವಿಭಾಗ ಬಳ್ಳಾರಿ ವಲಯದ ಸಂಡೂರು ತಾಲ್ಲೂಕು, ತೋರಣಗಲ್ಲು ಹೋಬಳಿ, ಯರಬನಹಳ್ಳಿ ಗ್ರಾಮ ವ್ಯಾಪ್ತಿಯ ಸರ್ವೇ ನಂಬರ್ 74 ಮತ್ತು 76 ಅರಣ್ಯ ವ್ಯಾಪ್ತಿಯಲ್ಲಿ (ಪರಿಹಾರತ್ಮಕ ನೆಡುತೋಪುಗಾಗಿ ಅರಣ್ಯ ಇಲಾಖೆಗೆ ನಿಗಧಿಪಡಿಸಿದ ಜಮೀನು) ಡಿ.ಜಿ.ಪಿ.ಎಸ್ ಮತ್ತು ಟೋಟಲ್ ಸ್ಟೇಷನ್ ಜಂಟಿ ಸರ್ವೆ ಮಾಡಿ ಸರ್ವೇ ವರದಿಯನ್ನು ಸಲ್ಲಿಸುವಂತೆ ಮಾನ್ಯ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು ಬಳ್ಳಾರಿ ಪ್ರಾದೇಶಿಕ ವಿಭಾಗ ಬಳ್ಳಾರಿ ಕಛೇರಿಯವರ ಪತ್ರ ಸಂಖ್ಯೆ ಎಂ1ಎಂಎನ್‌ಜಿ/ಜೆ.ಎಸ್.ಡಬ್ಲ್ಯೂ/2365/ಕನ್ವೇಯರ್/2018-19 ದಿನಾಂಕ 22/01/2021 ರಲ್ಲಿ ಸೂಚಿಸಿರುವ ಮೇರೆಗೆ ಹಾಗೂ ವಲಯ ಅರಣ್ಯಾಧಿಕಾರಿಗಳು ಬಳ್ಳಾರಿ ವಲಯ ಪತ್ರ ಸಂಖ್ಯೆ ವಅಅ/ಜೆ.ಎಸ್.ಡಬ್ಲ್ಯೂ/ಇನ್‌ಪ್ರಾಸ್ಟ್ರಕ್ಚರ್/2020-21 ದಿನಾಂಕ 09/02/2021 ರಲ್ಲಿ ಜಂಟಿ ಮೋಜಣಿ ಕಾರ್ಯವನ್ನು ಕೈಗೊಳ್ಳುವಂತೆ ಸೂಚಿಸಿರುವ ಹಿನ್ನಲೆಯಲ್ಲಿ ಸದರಿ ಜಂಟಿ ಸರ್ವೆ ಕಾರ್ಯಕ್ಕೆ ಕಂದಾಯ ಇಲಾಖೆ ಮೋಜಣಾಧಿಕಾರಿಗಳು, ಉಪವಲಯ ಅರಣ್ಯಾಧಿಕಾರಿ ಮೋಜಣಿದಾರರು ಕುಡಿತಿನಿ, ಮೆ.ಜೆ.ಎಸ್.ಡಬ್ಲ್ಯೂ ಲಿ.ತೋರಣಗಲ್ಲು ಸಂಸ್ಥೆಯ ಪ್ರತಿನಿಧಿಗಳು, ಮತ್ತು ಮೆ.ಚೈತನ್ಯ ಜಿಯೋ ಸರ್ವೇಸ್ ಹೊಸಪೇಟೆ ರವರು ಜಂಟಿಯಾಗಿ, ಜಂಟಿ ಸರ್ವೇ ಕಾರ್ಯವನ್ನು ದಿನಾಂಕ 15/2/2021 ರಂದು ಬೆಳಿಗ್ಗೆ 10.00 ಘಂಟೆಗೆ ಪ್ರಾರಂಭಿಸಲಾಯಿತು. ಜಂಟಿ ಮೋಜಣಿ ತಂಡವು ಮೊದಲು ಸದರಿ ಸರ್ವೇ ನಂಬರುಗಳ ನಕ್ಷೆಯಂತೆ ಸ್ಥಾನಿಕವಾಗಿ ಪರಿಶೀಲಿಸಲಾಗಿ ಒಟ್ಟು 10 ಗಡಿ ಬಿಂದುಗಳಿದ್ದು ಸ್ಥಳದಲ್ಲಿ ಪಿಲ್ಲರ್ ಗಳನ್ನು ಗಡಿ ಬಿಂದುಗಳಿಗೆ ಕಂಬಗಳನ್ನು ನಿರ್ಮಿಸಿರುವುದು ಕಂಡು ಬಂದಿರುತ್ತದೆ. ಪ್ರಸ್ತುತ ಪ್ರಸ್ತಾವನೆಯಲ್ಲಿ 8.4641 ಹೆಕ್ಟೇರ್ ಅರಣ್ಯ ಜಮೀನನ್ನು ನೀಡಲು ಪ್ರಸ್ತಾಪಿಸಿದ್ದು, ಸದರಿ ಜಮೀನಿನಲ್ಲಿ ಸರ್ವೆ ನಂಬರ್ 74 ರಲ್ಲಿ ಅರಣ್ಯ ಇಲಾಖೆ ವಿಸ್ತೀರ್ಣ 11.166Ac ಮತ್ತು 76 ರಲ್ಲಿ ಅರಣ್ಯ ಇಲಾಖೆ ವಿಸ್ತೀರ್ಣ 7.161/2 76 ರಲ್ಲಿ 9.12 ಎಕರೆ ಜಮೀನು ಟಿ.ಎಂ.ಸಿ ಕುರೇಕುಪ್ಪ ಇವರಿಗೆ ಮಾನ್ಯ ಜಿಲ್ಲಾಧಿಕಾರಿಗಳು ಬಳ್ಳಾರಿ ಇವರು ಸ್ವಚ್ಛ ಭಾರತ ಅಭಿಯಾನ ಯೋಜನೆ ಅಡಿಯಲ್ಲಿ ಮಂಜೂರು ಮಾಡಿರುವುದು ಕಂಡು ಬಂದಿರುತ್ತದೆ. ಸದರಿ ಜಮೀನು ಅರಣ್ಯ ಪ್ರದೇಶ ವ್ಯಾಪ್ತಿಯಲ್ಲಿ ಬರದಿರುವುದರಿಂದ ಅದನ್ನು ಕೈಬಿಟ್ಟು, ಸದರಿ ಸರ್ವೇ ನಂಬರಿನಲ್ಲಿ ಇನ್ನುಳಿದ ಜಮೀನಿನ ಪೈಕಿ ವಿಸ್ತೀರ್ಣ 7.417 ಹೆಕ್ಟೇರ್ ಜಮೀನು ನೀಡಲು ಮೆ.ಜೆ.ಎಸ್.ಡಬ್ಲ್ಯೂ ಇನ್‌ಪ್ರಾಸ್ಟ್ರಕ್ಚರ್ಸ್ ರವರು ಪ್ರಸ್ತಾವನೆಸಲ್ಲಿಸಿದ್ದಾರೆ ಸೂಚಿಸಿದ ಪ್ರಸ್ತಾವನೆಯ ನಕಾಶೆಯನ್ನು ಸರ್ವೇ ಕಾರ್ಯಕ್ಕೆ ಸಂಬಂಧಿಸಿದಂತೆ ಡಾಟಾವನ್ನು ಪ್ರೊಸೆಸಿಂಗ್ ಮಾಡಿದ ನಂತರ ಕಛೇರಿಗೆ ಸಲ್ಲಿಸುವುದಾಗಿ ತಿಳಿಸಿರುತ್ತಾರೆ. ಈ ಮೇಲ್ಕಂಡ ಎಲ್ಲಾ ಮಾಹಿತಿಯೊಂದಿಗೆ ಜಂಟಿ ಮೋಜಣಿ ಕಾರ್ಯವನ್ನು ದಿನಾಂಕ 15/02/2021 ರಂದು ಸಂಜೆ 5.00 ಘಂಟೆಗೆ ಮುಕ್ತಾಯಗೊಳಿಸಲಾಯಿತು. ಈ ಕೆಳಗೆ ಸಹಿ ಮಾಡಿರುವವರು ಪಂಚರ ಸಮಕ್ಷಮ ಈ ಮೇಲಿನ ಹೇಳಿಕೆಯನ್ನು ಗಣಕೀಕೃತ ಬೆರಳಚ್ಚು ಮಾಡಿಸಿ ಓದಿ ಓದಿಸಿ ಕೇಳಿ ಸರಿಯಿದೆ ಎಂದು ಒಪ್ಪಿ ಈ ಕೆಳಗೆ ಸಹಿ ಮಾಡಿರುತ್ತಾರೆ.

ತಾಲ್ಲೂಕ್ ಸರ್ವೇಯರ್
ಸಂಡೂರು